# ಶ್ರೀಮಾತೆಯವರ ವಚನಸುಧೆ

ಬಂಗಾಳಿ ಮೂಲ : **'ಮ'** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

## ಭಾಗ ೨

**ನಾ**ವು ಕೆಲವೊಮ್ಮೆ ಕೆಲಸದವರ ಮೂಲಕ ಶ್ರೀಮಾತೆಯವರ ಬಳಿಗೆ ಸಾಮಾನುಗಳನ್ನು ಕಳುಹಿಸಿಕೊಡುತ್ತಿದ್ದೆವು. ಶ್ರೀಮಾತೆಯವರು ಕೆಲಸದವನನ್ನು ಆಸನದ ಮೇಲೆ ಕುಳ್ಳಿರಿಸಿ ಊಟ ಮಾಡಿಸುತ್ತಿದ್ದರು. ಇತರರ ಹಾಗೆ, ಕೆಲಸದವರಿಗೆ ಒಂದು ಅಡುಗೆ ತಮಗೆ ಬೇರೆ ಅಡುಗೆ ಈ ರೀತಿ ಮಾಡುತ್ತಿರಲಿಲ್ಲ. ಶ್ರೀಮಾತೆಯವರಲ್ಲಿ ಅದೆಲ್ಲ ಇರುತ್ತಿರಲಿಲ್ಲ – ಅವರಿಗೆ ಎಲ್ಲರೂ ಒಂದೇ ಆಗಿದ್ದರು.

ಒಂದು ಸಲ ಬೇಲೂರು ಮಠದಿಂದ ಒಂದು ಹಸುವನ್ನು ತಂದು 'ಉದ್ಬೋಧನ'ದಲ್ಲಿ ಇಡುವ ಪ್ರಸ್ತಾಪಬಂತು. ಇದನ್ನು ಕೇಳಿ ಶ್ರೀಮಾತೆಯವರು ಹೇಳಿದರು: ''ಬೇಡ, ಬೇಡ. ಅಲ್ಲಿ ಅವುಗಳೆಲ್ಲ ಗಂಗಾದರ್ಶನ ಮಾಡುತ್ತವೆ, ಸ್ವತಂತ್ರವಾಗಿ ಓಡಾಡುತ್ತವೆ. ಸಾಧುಸಂಗವೂ ನಡೆಯುತ್ತಿದೆ. ಇಲ್ಲಿಗೆ ತಂದರೆ, ಒಂದು ಕೋಣೆಯಲ್ಲಿ ಕಟ್ಟಿಹಾಕಿಬಿಡುತ್ತಾರೆ! ಅದು ಸಾಧ್ಯವಿಲ್ಲ. ಅಂಥ ಹಾಲನ್ನು ನನ್ನಿಂದ ಕುಡಿಯಲಾಗದು.'' ಹಸುವನ್ನು ತರಲು ಅವರು ಬಿಡಲಿಲ್ಲ. ಇದರಿಂದ ತಿಳಿದುಬರುತ್ತದೆ, ಶ್ರೀಮಾತೆಯವರು ಒಂದು ಇರುವೆಗೂ ತಾಯಿಯಾಗಿದ್ದರು ಎಂದು.

*(ಶ್ರೀ 'ಮ' ದರ್ಶನ್, ಸ್ವಾಮಿ ನಿತ್ಯಾತ್ಮಾನಂದ, ೩ನೇ ಭಾಗ, ಪು. ೧೫೬)*

ಶ್ರೀಮಾತೆಯವರು ಒಬ್ಬ ವ್ಯಕ್ತಿಗೆ ಹೇಳಿದ್ದರು, '' ಮದುವೆ ಮಾಡಿಕೊಳ್ಳಬೇಡ, ಮಗೂ. ಮದುವೆಯಾಗಬೇಡ. ಮದುವೆಯಾದರೆ ರಾತ್ರಿ ಶಾಂತಿಯಿಂದ ನಿದ್ದೆಮಾಡಲಾರೆ. ಅಂಥ ಉರಿಯುವ ಅಗ್ನಿಕುಂಡವನ್ನು ಪ್ರವೇಶಿಸಬೇಡ.'' ಒಬ್ಬಾತ ಬ್ರಹ್ಮಚರ್ಯ ಸ್ವೀಕಾರ ಮಾಡಿದ್ದನ್ನು ಕಂಡು ಅವರು ಹೇಳಿದ್ದರು: ''ಹೌದು ಮಗೂ, ಈಗ ರಾತ್ರಿ ನೀನು ಚೆನ್ನಾಗಿ ನಿದ್ದೆ ಮಾಡಬಲ್ಲೆ.'' *(ಅಲ್ಲೇ, ಪು.೧೭೦)*

ಒಂದು ಬಾರಿ ಶ್ರೀಮಾತೆಯವರು ಅಶುಭ ದಿನದಂದು ದಕ್ಷಿಣೇಶ್ವರಕ್ಕೆ ಬಂದಿದ್ದರು. ಆದ್ದರಿಂದ, ಎರಡು ದಿನಗಳ ನಂತರ ಶ್ರೀರಾಮಕೃಷ್ಣರು ಮತ್ತೆ ಅವರನ್ನು ಊರಿಗೆ ಕಳುಹಿಸಿಕೊಟ್ಟರು– ದಿನ ಬದಲಾಯಿಸಿ ಯಾತ್ರೆ ಮಾಡಿ ಬರುವುದಕ್ಕಾಗಿ. ಶ್ರೀಮಾತೆಯವರು ಎರಡು ವರ್ಷ ಮರಳಿ ಬರಲಿಲ್ಲ. ಬಳಿಕ ಠಾಕೂರರು ಅವರಿಗೆ ಬರೆದು ಕಳುಹಿಸಿದರು: ''ಹೃದಯ ಹೋಗಿಬಿಟ್ಟಿದ್ದಾನೆ. ನನಗೆ ತುಂಬಾ ಕಷ್ಟವಾಗುತ್ತಿದೆ. ನನ್ನನ್ನು ನೋಡಿಕೊಳ್ಳಲು ಯಾರೂ ಇಲ್ಲ. ನೀನು ಬೇಗನೆ ಹೊರಟು ಬಾ.'' ಸುದ್ದಿ ತಿಳಿದ ಕೂಡಲೇ ಶ್ರೀಮಾತೆಯವರು ಹೊರಟು ಬಂದರು.



ಶ್ರೀಮಾತೆಯವರು ಭಕ್ತರನ್ನೆಲ್ಲ ಎಂಥ ಪ್ರೀತಿಯ ಬಂಧನದಿಂದ ಕಟ್ಟಿಹಾಕಿದ್ದರು! ಅದನ್ನು ವಿವರಿಸಲು ಸಾಧ್ಯವಿಲ್ಲ![೧] *(ಅಲ್ಲೇ, ಪು.೨೦೨)*

---

೧ ಶ್ರೀಮಾತೆಯವರು 'ಯಾತ್ರೆ ಬದಲಾಯಿಸಿದ್ದು' ಹಾಗೂ ಹೃದಯನು ಹೊರಟುಹೋದದ್ದು – ಇವೆರಡೂ ಬೇರೆ ಬೇರೆ ಸಮಯದಲ್ಲಿ ನಡೆದ ಘಟನೆಗಳು. ಶ್ರೀಮಾತೆಯವರು ನಾಲ್ಕನೇ ಬಾರಿ ದಕ್ಷಿಣೇಶ್ವರಕ್ಕೆ ಬಂದಾಗ (ಫೆಬ್ರವರಿ, ಮಾರ್ಚ್–೧೮೮೧) ಹೃದಯನ ದುರ್ವರ್ತನೆಯಿಂದಾಗಿ ಊರಿಗೆ ಮರಳಿದ್ದರು. ಹೃದಯನನ್ನು ದಕ್ಷಿಣೇಶ್ವರದಿಂದ ಕಳುಹಿಸಿದ್ದು ೧೮೮೧ರ ಮೇ–ಜೂನ್ ತಿಂಗಳಲ್ಲಿ. ಬಳಿಕ ಶ್ರೀರಾಮಕೃಷ್ಣರು ಕರೆ ಕಳುಹಿಸಿದಾಗ, ಶ್ರೀಮಾತೆಯವರು ಐದನೇ ಬಾರಿ (೧೮೮೨ರ ಫೆಬ್ರವರಿ– ಮಾರ್ಚ್‌ನಲ್ಲಿ) ದಕ್ಷಿಣೇಶ್ವರಕ್ಕೆ ಬಂದರು. ಆದರೆ ಆರನೇ ಬಾರಿ ಬಂದಾಗ (೧೮೮೪ರಲ್ಲಿ) ಠಾಕೂರರ ಕೈಕೀಲು ತಪ್ಪಿ ಹೋಗಿತ್ತು. ಆಗ ಶ್ರೀರಾಮಕೃಷ್ಣರು ಕೇಳಿದ್ದರು, ''ಯಾವಾಗ ಹೊರಟು ಬಂದೆ?'' ಎಂದು. ಶ್ರೀಮಾತೆಯವರು ಹೊರಟ ದಿನವನ್ನು ತಿಳಿದು, ಅವರಿಗೆ ಯಾತ್ರೆಯ ದಿನವನ್ನು ಬದಲಾಯಿಸಿ ಬರಲು ಹೇಳಿದ್ದರು. *(–ಸಂ.)*

ಒಂದು ಸಲ ಐದು ಜನ ಹುಡುಗರು ದೀಕ್ಷೆಗಾಗಿ ಶ್ರೀಮಾತೆಯವರ ಬಳಿಗೆ ಹೋದರು. ಒಬ್ಬ ಹುಡುಗ ತುಸು ಬೇರೆ ಸ್ವಭಾವದವನು. ಅವನನ್ನು ಹೊರಗೆ ಕುಳ್ಳಿರಿಸಿದರು. ಅವನು ಒಳಗೆ ಹೋದರೆ ದೇವರಕೋಣೆ ಅಪವಿತ್ರವಾಗುತ್ತಿತ್ತು! ಆ ಹುಡುಗ ಹೊರಗೆ ಕುಳಿತು ಅಳುತ್ತಿದ್ದ. ಶ್ರೀಮಾತೆಯವರು ದೇವರಕೋಣೆಯನ್ನು ಪ್ರವೇಶಿಸಿದಾಗ ನಾಲ್ಕು ಮಂದಿ ಹುಡುಗರನ್ನಷ್ಟೇ ಕಂಡರು. 'ಇನ್ನೊಬ್ಬ ಎಲ್ಲಿ' ಎಂದು ಅವರು ವಿಚಾರಿಸಿದರು. ಉಳಿದವರೆಲ್ಲ, ''ಅವನು ಅಗಸರ ಹುಡುಗ, ಹೊರಗೆ ಇದ್ದಾನೆ'' ಎಂದರು. ಅದನ್ನು ಕೇಳಿದ ಶ್ರೀಮಾತೆ ತಟಕ್ಕನೆ ಹೊರಗೆ ಬಂದು, ''ಬಾ ಮಗೂ, ಒಳಗೆ ಬಾ'' ಎನ್ನುತ್ತ ಅವನನ್ನು ಕೋಣೆಯೊಳಕ್ಕೆ ಕರೆತಂದರು. ಆದರೆ ಅವನು ಒಳಗೆ ಹೋಗಲು ತಯಾರಿಲ್ಲ. ಎರಡೂ ಕೈಗಳನ್ನು ಜೋಡಿಸಿ, ''ಇಲ್ಲಮ್ಮಾ, ಬೇಡ.'' ಎಂದ. ಆದರೆ ಶ್ರೀಮಾತೆಯವರು ಕೇಳಲಿಲ್ಲ. ಎಲ್ಲರೊಂದಿಗೆ ಅವನಿಗೂ ದೀಕ್ಷೆ ನೀಡಿದರು. *(ಅಲ್ಲೇ, ಪು.೨೮೭)*

ಒಬ್ಬ ಡಾಕ್ಟರ್ ಭಕ್ತ ಶ್ರೀಮಾತೆಯವರ ಬಳಿಗೆ ಹೋಗಿದ್ದ. ಅವನ ಮನೆಯಲ್ಲಿ ಎರಡು-ಮೂರು ವರ್ಷದ ಹೆಣ್ಣುಮಗುವಿತ್ತು; ಅಲ್ಲದೇ ಅವನ ಪತ್ನಿ ಹಾಗೂ ತಾಯಿ ಇದ್ದರು. ಹೊಲದಲ್ಲಿ ಧಾನ್ಯ ಕೂಡ ಬೆಳೆಯುತ್ತಿದ್ದರು. ಅನ್ನಕ್ಕೆ ಅಭಾವವಿಲ್ಲ. ಅವನು ಒಂದು ದಿನ ಶ್ರೀಮಾತೆಯವರ ಬಳಿಗೆ ಹೋಗಿ ಹೇಳಿದ, ''ನನಗೆ ಸಂಸಾರ ಹಿಡಿಸುತ್ತಿಲ್ಲ.'' ಅದಕ್ಕೆ ಶ್ರೀಮಾತೆ ಹೇಳಿದರು, ''ಸರಿ, ಎರಡು ದಿನ ಕಾದು ನೋಡು.'' ಈ ಅವಧಿಯಲ್ಲಿ ಅವನು ಶ್ರೀಮಾತೆಯವರೊಂದಿಗೆ ಮಾತುಕತೆ ನಡೆಸಿ, ತಾನು ಸಂಸಾರದಲ್ಲಿ ಇರಲಾರೆ ಎಂದು ಆ ಡಾಕ್ಟರ್ ನಿರ್ಧರಿಸಿಕೊಂಡ. ಎರಡು-ಮೂರು ದಿನಗಳ ನಂತರ ಅವನು ಸ್ನಾನ ಮಾಡಿ ಬಂದಾಗ, ಶ್ರೀಮಾತೆಯವರು ಅವನನ್ನು ಕರೆದು, ಅವನಿಗೆ ಸಂನ್ಯಾಸ ನೀಡಿದರು. ಅವನಿಗೆ ಈ ಮೊದಲೇ ಶ್ರೀಮಾತೆಯವರಿಂದ ಮಂತ್ರದೀಕ್ಷೆಯಾಗಿತ್ತು. ಅವನು ಕೆಲವು ದಿನಗಳ ಕಾಲ ಶ್ರೀಮಾತೆಯವರ ಬಳಿ ಕಳೆದ. ಈ ಸುದ್ದಿಯನ್ನೆಲ್ಲ ತಿಳಿದು ಡಾಕ್ಟರನ ಪತ್ನಿ ತನ್ನ ಮಗುವಿನೊಂದಿಗೆ ಅಲ್ಲಿಗೆ ಬಂದುಬಿಟ್ಟಳು. ಆಕೆ ಕೇಳಿದಳು, ''ನಮ್ಮ ಗತಿಯೇನು?'' ಅದಕ್ಕೆ ಶ್ರೀಮಾತೆ ಹೇಳಿದರು, ''ಯಾಕೆ, ನಿಮಗೆ ಊಟ-ಬಟ್ಟೆಗೇನೂ ತೊಂದರೆಯಿಲ್ಲ. ಅವನ ಕೆಲಸ ಅವನು ಮಾಡುತ್ತಾನೆ, ನಿಮ್ಮ ಕೆಲಸ ನೀವು ಮಾಡಿ.'' ಆ ಹೆಂಗಸು ತನ್ನ ಆಭರಣಗಳನ್ನೆಲ್ಲ ಶ್ರೀಮಾತೆಯವರಿಗೆ ನೀಡಬಯಸಿದಳು. ಅದನ್ನು ಒಪ್ಪದೆ ಶ್ರೀಮಾತೆ ಹೇಳಿದರು, ''ಅದು ಹೇಗಾಗುತ್ತದೆ? ನೀವು ನಿಮ್ಮ ಭಾವನೆಗೆ ಅನುಸಾರವಾಗಿ ಇರಿ. ಅವನು ತನ್ನ ಭಾವನೆಯ ಪ್ರಕಾರ ಇರಲಿ.''

ಅಯ್ಯೋ! ಒಬ್ಬಾಕೆ ಹೆಂಗುಸಾಗಿ ಇಂಥ ಮಾತನ್ನು ಯಾರಾದರೂ ಹೇಳಬಲ್ಲರೆ? ಠಾಕೂರರ ಸಹಧರ್ಮಿಣಿಗಲ್ಲದೆ ಇನ್ನಾರಿಗಾದರೂ ಈ ರೀತಿಯ ಮಾತನ್ನು ಹೇಳುವುದು ಸಾಧ್ಯವೆ?

ಡಾಕ್ಟರನ ಮನೆಗೆ ಸಮೀಪದಲ್ಲಿ ಒಂದು ಆಶ್ರಮವಿತ್ತು. ಅದು ಶ್ರೀರಾಮಕೃಷ್ಣರ ಹೆಸರಿನಲ್ಲಿತ್ತು. ಅದು ಕ್ರಮೇಣ ಪಾಳುಬಿದ್ದಿತ್ತು. ಶ್ರೀಮಾತೆಯವರು ಡಾಕ್ಟರನ್ನು ಅಲ್ಲಿಗೆ ಕಳುಹಿಸಿದರು. ಅವನು ವೀರಭಕ್ತನೆಂಬುದು ಶ್ರೀಮಾತೆಯವರಿಗೆ ಗೊತ್ತಿತ್ತಲ್ಲವೆ-ಅದಕ್ಕಾಗಿ ಅಲ್ಲಿಗೆ ಕಳುಹಿಸಿದರು. ಡಾಕ್ಟರನ ತಾಯಿ ಆಗಾಗ ಅಲ್ಲಿಗೆ ಬಂದು, ನೋಡಿ ಹೋಗುತ್ತಿದ್ದಳು. ಒಂದೊಂದು ಸಲ ಅವನ ಪತ್ನಿಯೂ ತಾಯಿಯೊಂದಿಗೆ ಹೋಗಿ ಬರುತ್ತಿದ್ದಳು. ಕೊನೆಗೆ ಆಶ್ರಮ ಅಲ್ಲಿ ಮತ್ತೆ ತಲೆಯೆತ್ತಿತ್ತು. ಆ ಭಕ್ತ (ಡಾಕ್ಟರ್) ಅಲ್ಲಿ ಚಿಕಿತ್ಸೆ ನೀಡಲು ಆರಂಭಿಸಿದ. ಎಂಟಾಣೆ ಅವನ ಫೀಸು! ಬಡವನಾಗಿದ್ದರೆ ಅಷ್ಟಾಗುತ್ತಿತ್ತು. ಶ್ರೀಮಂತನಾಗಿದ್ದರೆ, ''ಅಷ್ಟು ಹಣ ನೀಡದಿದ್ದರೆ ಚಿಕಿತ್ಸೆಗೆ ಹೋಗಲಾರೆ'' ಎನ್ನುತ್ತಿದ್ದ. ಏಳೆಂಟು ಮಂದಿ ಹುಡುಗರು ಅಲ್ಲಿದ್ದುಕೊಂಡು ವಿದ್ಯಾಭ್ಯಾಸ ಮಾಡುತ್ತಿದ್ದರು. ನಾಲ್ಕೈದು ಮಂದಿ ಸಾಧುಗಳೂ ಅಲ್ಲಿರುತ್ತಿದ್ದರು. ಪ್ರತಿ ತಿಂಗಳು ೩೦೦ ರೂಪಾಯಿ ಖರ್ಚಾಗುತ್ತಿತ್ತು. ಸಂನ್ಯಾಸಿಯಾಗಿದ್ದೂ ಆಶ್ರಮಕ್ಕಾಗಿ ಹಣ ಹೊಂದಿಸಬೇಕಾಗಿತ್ತು.[೨] ಅವನು ತುಂಬಾ ಕಷ್ಟಪಟ್ಟು ದುಡಿಯುತ್ತಿದ್ದ. ಶ್ರೀಕೃಷ್ಣನು ಅರ್ಜುನನಿಗೆ ಯುದ್ಧ ಮಾಡಲು ಹೇಳಿದ; ಬಳಿಕ ಉದ್ಧವನಿಗೆ ಬದರಿಕಾಶ್ರಮಕ್ಕೆ ಹೋಗಲು ಹೇಳಿದ. *(ಅಲ್ಲೇ, ಪು.೨೯೧-೨೯೩)*

ಶ್ರೀಮಾತೆಯವರು ನಾಲ್ಕು ಮಾತುಗಳನ್ನು ಹೇಳಿದ್ದರು. ಮೊದಲನೆಯದು: ''ಯಾರು ಪೂರ್ಣಕಾಮರೋ ಅವರ ಭಕ್ತಿ ಅಹೇತುಕವಾಗಿರುತ್ತದೆ. ಅವರನ್ನೇ ಈಶ್ವರಕೋಟಿ ಎನ್ನುವುದು.'' ಎರಡನೆಯದು: ''ಯಾರ ಬಳಿ ಇದೆಯೋ ಅವರು ಅಳೆಯಲಿ (ದಾನ ಮಾಡಲಿ), ಯಾರ ಬಳಿ ಇಲ್ಲವೋ ಅವರು ಜಪಿಸಲಿ.'' ಅಂದರೆ, ಯಾರಲ್ಲಿ ದಾನ ಮಾಡಲು ಶಕ್ತಿ ಇದೆಯೋ ಅವರು ದಾನ ಮಾಡಲಿ. 'ಅಳೆಯಲಿ' ಎಂದರೆ, ದಾನ ಮಾಡಲಿ ಎಂದರ್ಥ. ದಾನ ಮಾಡುವುದು ಎಂದರೆ ಪೂಜೆ ಮಾಡುವುದು, ಸೇವೆ ಮಾಡುವುದು – ಭಗವಂತನಿಗೆ ಮಾಡುತ್ತಿದ್ದೇನೆ ಎಂಬ ಭಾವದಿಂದ. ಅದಕ್ಕೆ ಶಕ್ತಿ, ಸಾಮರ್ಥ್ಯವಿಲ್ಲದಿದ್ದರೆ, ಕುಳಿತು ಜಪ ಮಾಡಬೇಕು. ಮೂರನೆಯದು: ಸಾಮಗ್ರಿ, ಬೇಕಾದಷ್ಟು ಸಂಗ್ರಹವಾಗಿದೆ, ಆದರೆ ಸ್ವಭಾವವೆಷ್ಟು ಬದಲಾಗಿದೆ? ಅಂದರೆ, ಭಗವಂತನಿಗೆ ಸಂಬಂಧಪಟ್ಟ ವಿಚಾರಗಳನ್ನು ಬೇಕಾದಷ್ಟು ಕೇಳಿದ್ದಾಗಿದೆ, ಆದರೆ ಅನುಭವ ಏನೂ ಆಗುತ್ತಿಲ್ಲ – ಕಾರಣ, ಪ್ರಕೃತಿ ತನ್ನತ್ತ ಸೆಳೆಯುತ್ತಿದೆ. ನಾಲ್ಕನೆಯದು: 'ಬಾಹ್ಯಪ್ರಜ್ಞೆ ಕಳೆದು

---

೨ ಆ ಸಂನ್ಯಾಸಿಯ ಹೆಸರು ಸ್ವಾಮಿ ಮಹೇಶ್ವರಾನಂದ. ಅವರು ಡಾಕ್ಟರ್ ಮಹಾರಾಜ್ ಅಥವಾ ವೈಕುಂಠ ಮಹಾರಾಜ್ ಎಂಬ ಹೆಸರಿನಿಂದ ಪರಿಚಿತರಾಗಿದ್ದರು. ಅವರು ನೀಡುತ್ತಿದ್ದ ಚಿಕಿತ್ಸೆಯಿಂದಾಗಿ ಬಹಳ ಹೆಸರುವಾಸಿಯಾಗಿದ್ದರು. ೧೯೧೩ರಲ್ಲಿ ಶ್ರೀಮಾತೆ ಅವರಿಗೆ ಮಂತ್ರದೀಕ್ಷೆ ನೀಡಿದ್ದರು. ಅದೇ ವರ್ಷ ದುರ್ಗಾಪೂಜೆಯ ಸಮಯದಲ್ಲಿ ಅವರಿಗೆ ಕಾವಿಬಟ್ಟೆಯನ್ನು ನೀಡಿದ್ದರು. ೧೯೧೮ರಲ್ಲಿ ಅವರು ಸ್ವಾಮಿ ಬ್ರಹ್ಮಾನಂದರಿಂದ ವಿಧಿಪೂರ್ವಕವಾಗಿ ಸಂನ್ಯಾಸ ಸ್ವೀಕಾರಮಾಡಿದ್ದರು. ಅವರ ಪೂರ್ವಾಶ್ರಮವಿದ್ದುದು ಬಾಂಕುರದಲ್ಲಿ. ಅಲ್ಲಿನ ಆಶ್ರಮವನ್ನು ಸ್ಥಾಪನೆ ಮಾಡಿದವರೂ ಅವರೇ. ಮುಂದೆ ಅವರು ಬಾಂಕುರ ಜಿಲ್ಲೆಯ ರಾಮಹರಿಪುರ ಆಶ್ರಮವನ್ನೂ ಆರಂಭಿಸಿದರು. *(-ಸಂ)*

ಹೋಗಿರುವ ಅವಸ್ಥೆಯಲ್ಲಿ ಮೃತ್ಯುವುಂಟಾದರೆ, ಅದರಿಂದ ಕೊನೆಗೆ ಏನಾಗುವುದು?' ಎಂಬ ಈ ಪ್ರಶ್ನೆಗೆ ಉತ್ತರವಾಗಿ ಶ್ರೀಮಾತೆ ಹೇಳಿದ್ದರು: ಸಾಯುವ ವೇಳೆಯಲ್ಲಿ ಅಜ್ಞಾನವುಂಟಾದರೆ ಅದರಿಂದ ದೋಷವಿಲ್ಲ. ಅಜ್ಞಾನವುಂಟಾಗುವ ಮುನ್ನ ಭಗವಂತನ ನಾಮಸ್ಮರಣೆ ಮಾಡಿದ್ದರೆ, ಅದರಿಂದ ಉತ್ತಮ ಫಲವುಂಟಾಗುವುದು. *(ಅಲ್ಲೇ, ೪ನೇ ಭಾಗ, ಪು.೨೧-೨೨)*

ಸಾಧುಗಳ ಆಶ್ರಮಕ್ಕೆ ಹೋಗಿ ಸೇವೆ ಮಾಡಬೇಕು. ಸಾಧುಗಳೆಲ್ಲ ಓಡಾಡುತ್ತ ನಾನಾ ಕೆಲಸಗಳನ್ನು ಮಾಡುತ್ತಿದ್ದಾರೆ – ಆಗ ಒಬ್ಬಾತ ಹೋಗಿ ಅಲ್ಲಿ ಧ್ಯಾನ, ಜಪ ಮಾಡುವುದಲ್ಲ. ಒಂದು ಸಲ ಕೆಲವರು ಭಕ್ತೆಯರು ಶ್ರೀಮಾತೆಯವರ ಬಳಿಗೆ ಹೋಗಿದ್ದರು. ಎಲ್ಲರೂ ಕುಳಿತು ಕಣ್ಣುಮುಚ್ಚಿ ಧ್ಯಾನ ಮಾಡುತ್ತಿದ್ದರು. ಆಗ ಶ್ರೀಮಾತೆಯವರು ಒಂದೆಡೆ ಸೆಗಣಿ ಸಾರಿಸುತ್ತಿದ್ದರು. ಒಬ್ಬಾಕೆ ಭಕ್ತೆ ಎದ್ದು ಹೋಗಿ ಅವರೊಂದಿಗೆ ಸಾರಿಸತೊಡಗಿದಳು. ಆಗ ಶ್ರೀಮಾತೆ ಹೇಳಿದರು, ''ಅವರೆಲ್ಲ ಧ್ಯಾನ ಮಾಡುತ್ತಿದ್ದಾರೆ. ನೀನು ಎದ್ದು ಬಂದೆಯಲ್ಲ?'' ಭಕ್ತೆ ಹೇಳಿದಳು, ''ಛೆ! ಅಂಥ ಧ್ಯಾನಕ್ಕೆ ಬೆಂಕಿಬೀಳ! ನೀವು ಸೆಗಣಿ ಸಾರಿಸುತ್ತಿದ್ದೀರಿ, ಆಗ ನಾನು ಕುಳಿತು ಧ್ಯಾನ ಮಾಡುವುದೆ? ನನಗಂತೂ ಅದು ಸಾಧ್ಯವಿಲ್ಲ.'' ಏನು ಮಾಡಬೇಕು, ಏನು ಮಾಡಬಾರದು ಅಂತ ಆ ಭಕ್ತೆಗೆ ಅರ್ಥವಾಗಿತ್ತು.[೩] *(ಅಲ್ಲೇ, ಪು.೧೦೦)*

ಶ್ರೀಮಾತೆಯವರು ಮೊದಲ ಬಾರಿ ರಾಜು ಗೋಮಂತನ ಮನೆಯಲ್ಲಿದ್ದರು. ಎರಡನೇ ಬಾರಿ ಮಡಾಪೋಡಾ ಘಾಟ್‌ನಲ್ಲಿದ್ದರು (ಸ್ಮಶಾನ ಘಾಟ್). ಮೂರನೇ ಬಾರಿ ಅವರು ನೀಲಾಂಬರ ಮುಖರ್ಜಿಯ ಮನೆಯಲ್ಲಿದ್ದರು. ಈ ಮೂರೂ ಸ್ಥಳ ಬೇಲೂರಿನಲ್ಲಿತ್ತು. ನಾಲ್ಕನೆಯ ಬಾರಿ ಬಾಗ್‌ಬಜಾರಿನ ಒಂದು ದೊಡ್ಡ ಗೋಡೌನಿನ ಮೇಲಂತಸ್ತಿನ ಕೋಣೆಯಲ್ಲಿದ್ದರು. ಅದು ದೇವಾಲಯಕ್ಕೆ ಹತ್ತಿರದಲ್ಲೇ ಇತ್ತು. ಕೆಳ ಅಂತಸ್ತಿನಲ್ಲಿ ಗೋಡೌನ್ ಇತ್ತು; ಅದು ಗೋಣಿಚೀಲಗಳಿಂದ ತುಂಬಿತ್ತು. ಮೇಲಂತಸ್ತಿಗೆ ಹೋಗುವ ದಾರಿ ಅವುಗಳ ನಡುವೆಯೇ ಇತ್ತು. ಐದನೆಯ ಬಾರಿ ಅವರು ಗಿರೀಶಚಂದ್ರ ಘೋಷ್‌ನ ಮನೆಯ ಎದುರಿಗೆ ಇದ್ದ ಮನೆಯಲ್ಲಿದ್ದರು. ಆರನೆಯ ಬಾರಿ ನಿವೇದಿತಾ ವಾಸವಾಗಿದ್ದ ಸ್ಥಳಕ್ಕೆ ಸಮೀಪದಲ್ಲಿದ್ದರು. ಅದಾದ ನಂತರ 'ಶ್ರೀಮಾತೆಯವರ ಮನೆ' (ಉದ್ಬೋಧನ) ನಿರ್ಮಾಣಗೊಂಡಿತು.[೪] *(ಅಲ್ಲೇ, ಪು.೨೬೨)*

ಕಲ್ಕತ್ತೆಯಲ್ಲಿ ಶ್ರೀಮಾತೆಯವರು ಬಾಡಿಗೆ ಮನೆಯಲ್ಲಿರುತ್ತಿದ್ದರು. ಎಷ್ಟು ಭಕ್ತನಾಗಿರುವನೋ, ಅವನಲ್ಲಿ ಅಷ್ಟು ಹಣವಿರದು ಎನ್ನುತ್ತಾರೆ. ಶ್ರೀರಾಮಕೃಷ್ಣರ ದೇಹತ್ಯಾಗವಾದ ಮೇಲೆ ಶ್ರೀಮಾತೆ ವೃಂದಾವನಕ್ಕೆ ಹೋದರು. ಅಲ್ಲಿ ಅವರು ಒಂದು ವರ್ಷ ಇದ್ದರು. ಅಲ್ಲಿಂದ ಮರಳಿ ಬಂದ ಮೇಲೆ ಬಲರಾಮ ಬಾಬುವಿನ ಮನೆಯಲ್ಲಿ ತಂಗಿದ್ದು ಬಳಿಕ ಜಯರಾಮಬಾಟಿಗೆ ಹೋದರು. ಕೆಲವು ದಿನಗಳ ನಂತರ ಅಲ್ಲಿಂದ ಕಾಲುನಡಿಗೆಯಲ್ಲಿ ಹೊರಟರು. ಹಣವಿಲ್ಲದ್ದರಿಂದ ಗಾಡಿ ಅಥವಾ ಪಲ್ಲಕ್ಕಿಯನ್ನು ಮಾಡಿಕೊಂಡು ಹೋಗುವುದು ಹೇಗೆ? ವರ್ಧಮಾನದಲ್ಲಿ ಒಂದು ಕಡೆ ತಲುಪಿದಾಗ, ಆಯಾಸದಿಂದ ಒಂದು ಕೆರೆಯ ಬಳಿಯಲ್ಲಿ ಕುಳಿತುಬಿಟ್ಟರು ಶ್ರೀಮಾತೆ. ಭಕ್ತನೊಬ್ಬ ಬೀಸಣಿಗೆಯಿಂದ ಗಾಳಿ ಬೀಸತೊಡಗಿದ. ಅಲ್ಲಿಂದ ಮತ್ತೆ ಒಂದೂ ಕಾಲು ಅಥವಾ ಒಂದೂವರೆ ರೂಪಾಯಿಗೆ ಎತ್ತಿನ ಗಾಡಿಯಲ್ಲಿ ಪ್ರಯಾಣ ಮುಂದುವರಿಸಿದರು.[೫] *(ಅಲ್ಲೇ, ೪ನೇ ಭಾಗ, ಪು.೨೮೪; ೫ನೇ ಭಾಗ, ಪು. ೧೭೫-೭೬)*

ಭಕ್ತರಲ್ಲಿ ಕೆಲವರು ಶ್ರೀಮಾತೆಯವರಿಗೆ ಸಮಾಧಿಯಾಗುತ್ತಿದ್ದುದನ್ನು ನೋಡಿದ್ದರು – ಯಾರು ತುಂಬಾ ಅದೃಷ್ಟಶಾಲಿಗಳಾಗಿದ್ದರೋ ಅವರು. ಸ್ಥಿರವಾಗಿ, ಕಣ್ಣುಮಿಟುಕಿಸದೆ ಸಮಾಧಿಯ ಸ್ಥಿತಿಯಲ್ಲಿರುತ್ತಿದ್ದರು. ಅವರು ತುಂಬಾ ಲಜ್ಜಾ ಸ್ವಭಾವದವರಲ್ಲವೆ? ಆದ್ದರಿಂದಲೇ ಯಾರು ತುಂಬಾ ಪ್ರೀತಿಪಾತ್ರರೋ, ಅಂಥ ಭಕ್ತರನ್ನು ಅವರ ಬಳಿ ಇರುತ್ತಿದ್ದವರು ಕರೆಯುತ್ತಿದ್ದರು. ಆಹ! ಅದೆಂಥ ದುರ್ಲಭವಾದ ದೃಶ್ಯವಾಗಿರುತ್ತಿತ್ತು! *(ಅಲ್ಲೇ, ೫ನೇ ಭಾಗ, ಪು.೩೨೯)*.

*(ಮುಂದುವರಿಯುವುದು)*

---

೩ ಆ ಭಕ್ತೆ 'ಮ' ಅವರ ಪತ್ನಿ– ನಿಕುಂಜಾದೇವಿ. *(–ಸಂ)*

೪ 'ಮ' ಅವರ ಈ ಸ್ಮೃತಿಲೇಖನದಲ್ಲಿ ಕೆಲವು ದೋಷಗಳಿವೆ. ಶ್ರೀಮಾತೆಯವರು ೧೮೮೮ರ ಮೇ–ಜೂನ್ ತಿಂಗಳಲ್ಲಿ ಬಹುಶಃ ಬೇಲೂರಿನ ನೀಲಾಂಬರ ಬಾಬುವಿನ ಮನೆಯಲ್ಲಿ ಆರು ತಿಂಗಳು ವಾಸವಾಗಿದ್ದರು. ಅದರ ನಂತರ ಬೇರೆ ಬೇರೆ ಸಮಯದಲ್ಲಿ ಬೇಲೂರಿನ ರಾಜು ಗೋಮಂತನ ಮನೆಯಲ್ಲಿ (ಬಹುಶಃ ೧೮೯೦ರ ಮೊದಲ ಭಾಗದಲ್ಲಿ), ಘುಸುಡಿ ಭಾಗದಲ್ಲಿದ್ದ ಸ್ಮಶಾನದ ಬಳಿ 'ಮಡಾ ಪೋಡಾ' ಘಾಟ್‌ನಲ್ಲಿ (೧೮೯೦ರ ಮೇ–ಜೂನ್), ಬಳಿಕ ಮತ್ತೆ ನೀಲಾಂಬರ ಬಾಬುವಿನ ಉದ್ಯಾನದ ಮನೆಯಲ್ಲಿ (೧೮೯೩ರ ಜೂನ್–ಜುಲೈ) ಶ್ರೀಮಾತೆಯವರು ತಂಗಿದ್ದರು. ಬಾಗ್‌ಬಜಾರಿನ ಮೂರು ಪ್ರದೇಶಗಳ ವಿಚಾರವಾಗಿ 'ಮ' ಅವರು ಉಲ್ಲೇಖಿಸಿದ್ದರಲ್ಲಿ ಮೊದಲಿಗೆ ಅವರು ಸರ್ಕಾರ್‌ಬಾಡಿ ಲೇನ್‌ನ ಗೋದಾಮ್‌ಬಾಡಿಯಲ್ಲಿ (೧೮೯೬ರ ಮೇ ತಿಂಗಳ ಕೊನೆಯ ಅರ್ಧದಲ್ಲಿ), ಎರಡನೆಯದಾಗಿ ೨೦/೨, ಬೋಸ್‌ಪಾರಾ ಲೇನ್‌ನಲ್ಲಿ (೧೮೯೮ರ ಮಾರ್ಚ್) ಹಾಗೂ ಮೂರನೇ ಬಾರಿ ೧೬, ಬೋಸ್ ಪಾರಾ ಲೇನ್‌ನಲ್ಲಿ (೧೯೦೦ ಅಕ್ಟೋಬರ್) ವಾಸವಾಗಿದ್ದರು. ಇದಲ್ಲದೆ ಶ್ರೀಮಾತೆಯವರು ೧೯೦೪ರ ಜನವರಿಯಿಂದ ಒಂದು ವರ್ಷ ೨/೧ ಬಾಗ್‌ಬಜಾರ್ ಸ್ಟ್ರೀಟಿನ 'ನೀಲಮಣಿ' ಶಾಂತಿಧಾಮದಲ್ಲಿ ಕೂಡ ತಂಗಿದ್ದರು. ಬಾಡಿಗೆ ಮನೆಯಲ್ಲಿದ್ದುದನ್ನು ಹೊರತುಪಡಿಸಿ ಕೂಡ ಬೇರೆ ಬೇರೆ ಸಮಯಗಳಲ್ಲಿ ಬಲರಾಮಬಾಬುವಿನ ಮನೆಯಲ್ಲಿ , 'ಮ' ಅವರ ಮನೆಯಲ್ಲಿ ಹಾಗೂ ಬಾಗ್‌ಬಜಾರಿನ ಇನ್ನೂ ಒಂದೆರಡು ಮನೆಗಳಲ್ಲಿ ಅವರು ತಂಗಿದ್ದರು. *(–ಸಂ)*

೫ ಈ ಘಟನೆ ನಡೆದದ್ದು ೧೮೮೭ರ ಸೆಪ್ಟೆಂಬರ್ ತಿಂಗಳಲ್ಲಿ. ಶ್ರೀಮಾತೆಯವರು ಕಲ್ಕತ್ತೆಯಿಂದ ಸ್ವಾಮಿ ಯೋಗಾನಂದ, ಗೋಲಾಪ್–ಮಾ ಮುಂತಾದವರೊಂದಿಗೆ ಕಾಮಾರಪುಕುರಕ್ಕೆ ಮರಳಿದ ಸಂದರ್ಭ. ಆಗ ದಾರಿ ಖರ್ಚಿಗೆ ಹಣವಿಲ್ಲದ್ದರಿಂದ ಶ್ರೀಮಾತೆಯವರು ವರ್ಧಮಾನ ತನಕ ಟ್ರೈನಿನಲ್ಲಿ ಹೋಗಿದ್ದರು. ಅಲ್ಲಿಂದ ಉಚಾಲನ್‌ವರೆಗಿನ ೨೫ ಕಿಲೋಮೀಟರ್ ದಾರಿಯನ್ನು ಕಾಲುನಡಿಗೆಯಲ್ಲಿ ಪ್ರಯಾಣಿಸಿದರು. ಈ ಶ್ರಮದಿಂದಾಗಿ ಶ್ರೀಮಾತೆಯವರು ಅತ್ಯಂತ ಆಯಾಸಗೊಂಡಿದ್ದರು. ಬಹುಶಃ 'ಮ' ಅವರ ವಿವರಣೆಯಂತೆ, ಉಚಾಲನ್‌ದಿಂದ ಕಾಮಾರಪುಕುರದವರೆಗೆ ಎತ್ತಿನ ಗಾಡಿಯಲ್ಲಿ ಪ್ರಯಾಣ ಮಾಡಲು ವ್ಯವಸ್ಥೆಯಾಗಿದ್ದಿರಬೇಕು. ಶ್ರೀಮಾತೆಯವರು ವೃಂದಾವನ ಮೊದಲಾದೆಡೆಗಳಿಗೆ ತೀರ್ಥಯಾತ್ರೆ ಮಾಡಿ ಮುಗಿಸಿದ ನಂತರ, ಆಗಸ್ಟ್ ೩೧ರ ವೇಳೆಗೆ ಕಲ್ಕತ್ತೆಗೆ ಮರಳಿದ್ದಿರಬೇಕು. *(–ಸಂ)*